# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2070 (2460) |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ರೀತಿಯ ವಸತಿ ಶಾಲೆ/ವಸತಿ ನಿಲಯಗಳ ಸಂಖ್ಯೆ ಎಷ್ಟು; ದಾಖಲಾತಿ ಹೊಂದಿರುವ ಮಕ್ಕಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಸಂಪೂರ್ಣ ವಿವರ ನೀಡುವುದು; ವಸತಿ ನಿಲಯಗಳು ಮತ್ತು ಶಾಲೆಗಳಿಗೆ ಸರ್ಕಾರ ಮೀಸಲಿಟ್ಟ ಹಣವೆಷ್ಟು; ಎಷ್ಟು ಬಿಡುಗಡೆ ಮಾಡಿದೆ;</td>
<td>
ಸಮಾಜ ಕಲ್ಯಾಣ ಇಲಾಖೆ ವತಿಯಿಂದ 67 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ (1ರಿಂದ 5ನೇ ತರಗತಿ), 1215 ಮೆಟ್ರಿಕ್ ಪೂರ್ವ ಮತ್ತು 04 ದೀನ್‌ದಾಯಳ್ ಉಪಾಧ್ಯಾಯ ವಿದ್ಯಾರ್ಥಿಗಳು ಹಾಗೂ 719 ಸಂಖ್ಯೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಸೇರಿದಂತೆ ಒಟ್ಟಾರೆ 2005 ವಸತಿ ನಿಲಯಗಳನ್ನು ಕಾರ್ಯ ನಿರ್ವಹಿಸುತ್ತಿವೆ. ಸದರಿ ನಿಲಯಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವಿವರ</th><th>ಒಟ್ಟು</th><th>ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>01</td><td>ವಸತಿ ಶಾಲೆ</td><td>67</td><td>6694</td></tr>
<tr><td>02</td><td>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ</td><td>1215</td><td>96688</td></tr>
<tr><td>03</td><td>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ</td><td>719</td><td rowspan="2">119359</td></tr>
<tr><td>04</td><td>ದೀನದಯಾಳ್ ಉಪಾದ್ಯಾಯ ವಿ.ನಿ</td><td>4</td></tr>
<tr><td></td><td>ಒಟ್ಟು :</td><td>2005</td><td>222741</td></tr>
</table>
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸಲಾಗುತ್ತಿದ್ದು, ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ 2025-26ನೇ ಸಾಲಿನಲ್ಲಿ 200213 ವಿದ್ಯಾರ್ಥಿಗಳು ದಾಖಲಾಗಿ ವ್ಯಾಸಂಗ ಮಾಡುತ್ತಿದ್ದಾರೆ.
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶಾಲೆ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ ಈ ಕೆಳಕಂಡಂತಿದೆ.
<table>
<tr><th>ವೃಂದ</th><th>ಮಂಜೂರಾದ ಸಂಖ್ಯೆ</th><th>ಖಾಯಂ ಸಿಬ್ಬಂದಿಗಳ ಸಂಖ್ಯೆ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>ಬೋಧಕ ಸಿಬ್ಬಂದಿ</td><td>9262</td><td>5456</td><td>3806</td></tr>
<tr><td>ಬೋಧಕೇತರ ಸಿಬ್ಬಂದಿ</td><td>2386</td><td>1120</td><td>1266</td></tr>
<tr><td>ಒಟ್ಟು</td><td>19861</td><td>6583</td><td>5072</td></tr>
</table>
</td>
</tr>
</table>

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ವಿವರ | ಭರ್ತಿ ಯಾದ ಹುದ್ದೆಗಳ ವಿವರ | ಖಾಲಿ ಹುದ್ದೆಗಳ ವಿವರ |
|---|---|---|---|---|
| 1 | ಸೀನಿಯರ್ ವಾರ್ಡನ್ | 31 | 31 | 00 |
| 2 | ವಾರ್ಡನ್ | 1843 | 1228 | 615 |
| 3 | ಜೂನಿಯರ್ ವಾರ್ಡನ್ | 518 | 415 | 103 |
| 4 | ವಸತಿ ಶಾಲೆ ಶಿಕ್ಷಕರು | 340 | 131 | 209 |
| 5 | ಅಡುಗೆಯವರು | 4085 | 2017 | 2068 |
| 6 | ಅಡುಗೆ ಸಹಾಯಕರು | 2883 | 323 | 2560 |
| 7 | ಕಾವಲುಗಾರರು | 1968 | 140 | 1828 |
| | ಒಟ್ಟು | 11668 | 4285 | 7383 |

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳು ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಶಾಲೆ/ಕಾಲೇಜುಗಳಿಗೆ ಮೀಸಲಿಟ್ಟ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಆ)** 2023-24, 2024-25, 2025-26ನೇ ಸಾಲಿನಲ್ಲಿ ವಸತಿ ಶಾಲೆ/ವಸತಿ ನಿಲಯದ ಮಕ್ಕಳಿಗೆ ಶೂ, ಸಾಕ್ಸ್, ಶುಚಿತ್ವ ಕಿಟ್ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಯಾವ ತಿಂಗಳಿನಲ್ಲಿ ಒದಗಿಸಲಾಗಿದೆ; ಪ್ರತಿ ತಿಂಗಳವಾರ ಪ್ರತ್ಯೇಕ ಮಾಹಿತಿ ನೀಡುವುದು; ಯಾವ ಸಂಸ್ಥೆಯಿಂದ/ಕಂಪನಿಯಿಂದ/ಇನ್ನಿತರ ಮೂಲದಿಂದ ಈ ವಸ್ತುಗಳನ್ನು ಖರೀದಿಸಲಾಗಿದೆ; ಎಷ್ಟು ಮೊತ್ತ ಪಾವತಿಸಲಾಗಿದೆ; (ಪಾವತಿಸಿದ ಮೊತ್ತದ ಸಂಪೂರ್ಣ ವಿವರ ನೀಡುವುದು)

2023-24, 2024-25, 2025-26ನೇ ಸಾಲಿನಲ್ಲಿ ವಸತಿ ಶಾಲೆ/ವಸತಿ ನಿಲಯದ ಮಕ್ಕಳಿಗೆ ಶೂ, ಸಾಕ್ಸ್, ಶುಚಿತ್ವ ಕಿಟ್ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿ ಶಾಲೆಗಳಿಗೆ ಆದೇಶ ಸಂಖ್ಯೆ:ಸಕಇ 194 ಎಂಡಿಎಸ್ 2022, ದಿನಾಂಕ:26.02.2024 ರಲ್ಲಿ 2023-24ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಒಟ್ಟಾರೆ ರೂ.27,06,21,477/- ಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂಬು ಮತ್ತು ಮಾರ್ಜಕ ನಿಯಮಿತ ಇವರಿಂದ ಖರೀದಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ, ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ರೂ.5,03,98,463/- ಗಳ ವೆಚ್ಚದಲ್ಲಿ ಶುಚಿ ಸಂಭ್ರಮ ಕಿಟ್ ಗಳನ್ನು ಪೂರೈಕೆ ಮಾಡಲಾಗಿರುತ್ತದೆ.

ಆದೇಶ ಸಂಖ್ಯೆ:ಸಕಇ 145 ಎಂಡಿಎಸ್ 2024, ದಿನಾಂಕ:20.07.2024 ರಲ್ಲಿ 2024-25ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಒಟ್ಟಾರೆ ರೂ.30,39,31,000/- ಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂಬು ಮತ್ತು ಮಾರ್ಜಕ ನಿಯಮಿತ ರವರಿಂದ ಖರೀದಿಸಲಾಗಿರುತ್ತದೆ. ಅದರನ್ವಯ, ಸದರಿ ಸಂಸ್ಥೆಗೆ ದಿನಾಂಕ:17.08.2024 ರಂದು ಸರಬರಾಜು ಆದೇಶವನ್ನು ನೀಡಲಾಗಿದ್ದು, ಸದರಿ ಸಂಸ್ಥೆಯವರು ಫೆಬ್ರುವರಿ 2025ರ ಅಂತ್ಯಕ್ಕೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೀಡುವ ಶುಚಿ ಕಿಟ್‌ಗಳನ್ನು ಪೂರೈಸಿರುತ್ತಾರೆ ಹಾಗೂ ವಿದ್ಯಾರ್ಥಿಗಳಿಗೆ ವಿತರಿಸುವ ಶೂ, ಸಾಕ್ಸ್, ಟೈ, ಬೆಲ್ಟ್ ಗಳು ಹಾಗೂ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಪೂರೈಕೆ ಮಾಡಲಾಗಿರುತ್ತದೆ.

ಮೆ|| ಕೆಎಸ್‌ಡಿಎಲ್ ಸಂಸ್ಥೆರವರು ವಸತಿ ಶಾಲೆ/ಕಾಲೇಜುಗಳಿಗೆ ಜುಲೈ-2025ರ ಮಾಹೆಯಿಂದ ಮಾರ್ಚ್ 2026 ಮಾಹೆಯವರೆಗೆ ಬಾಲಕರಿಗೆ

ನಿರ್ಮಲ ಕಿಟ್ ಹಾಗೂ ಬಾಲಕಿಯರಿಗೆ ಸ್ಫೂರ್ತಿ ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಶೂ, ಸಾಕ್ಸ್‌ಗಳನ್ನು ಈ ಕೆಳಕಂಡಂತೆ ಖರೀದಿಸಲಾಗಿದೆ.

**2023-24**

ಆದೇಶ ಸಂಖ್ಯೆ:ಸಕಇ-ಎಂಡಿಎಸ್/43/2023, ದಿನಾಂಕ 27.03.2023 ರಲ್ಲಿ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಟೈ ಮತ್ತು ಬೆಲ್ಟ್ ಗಳನ್ನು ರೂ.17.33 ಕೋಟಿಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ಅಡಿ ವಿನಾಯಿತಿ ಪಡೆದಿರುವ ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್ಕರ್) ಸಂಸ್ಥೆಯಿಂದ ರೂ.9.64 ಕೋಟಿಗಳ ಮೊತ್ತದಲ್ಲಿ ಖರೀದಿಸಲಾಗಿದೆ.

**2024-25**

2024-25ನೇ ಸಾಲಿನಲ್ಲಿ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಟೈ ಮತ್ತು ಬೆಲ್ಟ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ಅಡಿ ವಿನಾಯಿತಿ ಪಡೆದಿರುವ ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್ಕರ್) ಸಂಸ್ಥೆಯಿಂದ ರೂ.14.41 ಕೋಟಿಗಳಲ್ಲಿ ಖರೀದಿಸಲಾಗಿದೆ.

**2025-26**

ಆದೇಶ ಸಂಖ್ಯೆ ಸಕಇ 327 ಎಂಡಿಎಸ್ 2024, ದಿನಾಂಕ 23.06.2025ರನ್ವಯ 2025-26ನೇ ಸಾಲಿಗೆ ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಒಟ್ಟು ರೂ.17,12,22,924 ವೆಚ್ಚದಲ್ಲಿ KTPP ಪೋರ್ಟಲ್ ಮುಖಾಂತರ ಟೆಂಡರ್ ಮೂಲಕ ಖರೀದಿಸಲು ನಂತರ, ದಿನಾಂಕ 23.06.2025ರಂದು ಆದೇಶಿಸಲಾಗಿದೆ 6ನೇ ಹಾಗೂ 11ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ವಸ್ತುಗಳನ್ನು ಕಲಂ 4(ಜಿ) ವಿನಾಯಿತಿ ಅಡಿಯಲ್ಲಿ ಲಿಡ್ಕರ್ ಸಂಸ್ಥೆಯಿಂದ ಖರೀದಿಸಲು ಅನುಮೋದನೆ ನೀಡಲಾಗಿದ್ದು, ಅದರನ್ವಯ ದಿನಾಂಕ 01.07.2025 ಹಾಗೂ 02.07.2025ರಂದು ಸರಬರಾಜು ಆದೇಶಗಳನ್ನು ಹೊರಡಿಸಲಾಗಿದ್ದು, ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಟೈ ಮತ್ತು ಬೆಲ್ಟ್ ಗಳನ್ನು ಪೂರೈಸಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ 2023-24, 2024-25, 2025-26ನೇ ಸಾಲಿನಲ್ಲಿ ಈ ಕೆಳಕಂಡಂತೆ ಮೂಲಭೂತ ಸೌಕರ್ಯಗಳನ್ನು ಪೂರೈಸಲಾಗಿದೆ.

(ರೂಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಸಾಮಾಗ್ರಿಗಳ ವಿವರ | ಅನುದಾನ | ಸರಬರಾಜು ದಾರರ ವಿವರ |
|---|---|---|---|---|
| 1 | 2023-24 | ಟೂ ಟಯರ್ ಕಾಟ್ ಗಳು | 900.00 | M/s.SK Steel industries, Bangalore |
| 2 | 2023-24 | ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ | 900.00 | M/s.Anand Comforts, Tipatur |

| | | | | |
|---|---|---|---|---|
| 3 | 2023-24 | ಶೂ ಮತ್ತು ಸಾಕ್ಸ್ | 286.87 | ಲಿಡ್ಕರ್, ಬೆಂಗಳೂರು |
| 4 | 2023-24 | ಪಠ್ಯ ಪುಸ್ತಕ ಲೇಖನಾ ಸಾಮಗ್ರಿ | 315.59 | ಎಂಎಸ್‌ಐಎಲ್, ಬೆಂಗಳೂರು |
| 5 | 2023-24 | ಸಮವಸ್ತ್ರ | 782.19 | ಕೆಹೆಚ್‌ಡಿಸಿ, ಬೆಂಗಳೂರು |
| 6 | 2023-24 | ಶುಚಿಸಂಭ್ರಮ ಕಿಟ್ | 2309.40 | ಕೆಎಸ್‌ಡಿಎಲ್, ಬೆಂಗಳೂರು |
| 3 | 2024-25 | ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ | 500.00 | M/s.Anand Comforts, Tipatur |
| 4 | 2024-25 | ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ | 450.00 | M/s.Karnataka State Coir Development Corporation, Bangalore |
| 5 | 2024-25 | ಶೂ ಮತ್ತು ಸಾಕ್ಸ್ | 349.73 | ಲಿಡ್ಕರ್, ಬೆಂಗಳೂರು |
| 6 | 2024-25 | ಪಠ್ಯ ಪುಸ್ತಕ ಲೇಖನಾ ಸಾಮಗ್ರಿ | 398.64 | ಎಂಎಸ್‌ಐಎಲ್, ಬೆಂಗಳೂರು |
| 7 | 2024-25 | ಸಮವಸ್ತ್ರ | 1101.10 | ಕೆಹೆಚ್‌ಡಿಸಿ, ಬೆಂಗಳೂರು |
| 8 | 2024-25 | ಶುಚಿಸಂಭ್ರಮ ಕಿಟ್ | 3933.96 | ಕೆಎಸ್‌ಡಿಎಲ್, ಬೆಂಗಳೂರು |
| 9 | 2025-26 | ಜಮಖಾನ ಬೆಡ್ ಶೀಟ್ | 1000.00 | M/s.Kendriya Bhandar, Bengaluru |
| 10 | 2025-26 | Shoes and socks | 280.00 | M/s Best Polymer, Bengaluru |
| 11 | 2025-26 | ಪಠ್ಯ ಪುಸ್ತಕ ಲೇಖನಾ ಸಾಮಗ್ರಿ | 384.96 | ಎಂಎಸ್‌ಐಎಲ್, ಬೆಂಗಳೂರು |
| 12 | 2025-26 | ಸಮವಸ್ತ್ರ | 998.79 | ಕೆಹೆಚ್‌ಡಿಸಿ, ಬೆಂಗಳೂರು |
| 13 | 2025-26 | ಶುಚಿ ಸಂಭ್ರಮ ಕಿಟ್ | 4373.39 | ಕೆಎಸ್‌ಡಿಎಲ್, ಬೆಂಗಳೂರು |

| | | |
|---|---|---|
| ಇ) | ವಸತಿ ಶಾಲೆ/ವಸತಿ ನಿಲಯದ ಮಕ್ಕಳಿಗೆ ಸರಿಯಾದ ಸಮಯದಲ್ಲಿ ಶೂ, ಸಾಕ್ಸ್, ಶುಚಿತ್ವ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ವಿತರಿಸುವಲ್ಲಿ ವಿಳಂಬ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಗಳನ್ನು ಖರೀದಿಸುವ ಸಂಬಂಧ ಪ್ರತಿ ವರ್ಷ 4(ಜಿ) ವಿನಾಯಿತಿ ಪಡೆದ ಲಿಡ್ಕರ್ ಸಂಸ್ಥೆಯ ಮೂಲಕ ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದ್ದು, ಸದರಿ ಸಂಸ್ಥೆಗೆ ಪ್ರತಿ ವರ್ಷ4(ಜಿ) ವಿನಾಯಿತಿ ಪಡೆದು ವಿದ್ಯಾರ್ಥಿಗಳಿಗೆ ಸರಬರಾಜು ಮಾಡಲು ವಿಳಂಬವಾಗುತ್ತಿರುವುದರಿಂದ ಪ್ರಸಕ್ತ ವರ್ಷದಿಂದ ರಾಜ್ಯ ಮಟ್ಟದಲ್ಲಿಯೇ ಇ-ಟೆಂಡರ್ ಆಹ್ವಾನಿಸಿ ಪೂರೈಸಲು ಕ್ರಮವಹಿಸಲಾಗಿದೆ.<br><br>ಅಲ್ಲದೇ ಇಲಾಖೆ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ನಿಯಮಿತ ರವರಿಗೆ ಪ್ರತಿ ವರ್ಷ 4(ಜಿ) ವಿನಾಯಿತಿ ಪಡೆದು ಶೂಚಿ ಸಂಭ್ರಮ ಮತ್ತು ಸಿರಿಗಂಧದ ಕಿಟ್‌ಗಳನ್ನು ವಿತರಿಸಲು ಕ್ರಮಹಿಸಲಾಗುತ್ತಿದ್ದು, ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ಆರ್ಥಿಕ ಇಲಾಖೆಯಿಂದ 4(ಜಿ) ವಿನಾಯಿತಿ ನೀಡಲು ವಿಳಂಬವಾದಲ್ಲಿ ಸ್ಥಳೀಯವಾಗಿ ವಿದ್ಯಾರ್ಥಿಗಳಿಗೆ ಖರೀದಿ ಮಾಡಿ ವಿತರಿಸಲು ಕ್ರಮಕೈಗೊಳ್ಳಲಾಗಿದ್ದು ವಿದ್ಯಾರ್ಥಿಗಳಿಗೆ |

| | | |
|---|---|---|
| | | ಅನಾನುಕೂಲವಾಗದಂತೆ ಕಾಲಕಾಲಕ್ಕೆ ನಿಗಧಿತ ಅವಧಿಯಲ್ಲಿ ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |
| ಈ) | ವಸತಿ ಶಾಲೆ/ವಸತಿ ನಿಲಯಗಳಲ್ಲಿ ಕಳಪೆ ಗುಣಮಟ್ಟದ ಆಹಾರ ಸರಬರಾಜು, ತರಕಾರಿ ಇತ್ಯಾದಿಗಳ ಕುರಿತು ಹಲವು ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಸರ್ಕಾರ ಯಾವ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ; ಇಲ್ಲಿಯವರೆಗೆ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ? | 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 166ರಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ. 100/-ಗಳ ಬೋಜನಾ ವೆಚ್ಚವನ್ನು ಹೆಚ್ಚಿಸಿ ಪ್ರತಿ ವಿದ್ಯಾರ್ಥಿಗೆ ರೂ. 1850/- ಬೋಜನಾ ವೆಚ್ಚವನ್ನು ನಿಗದಿಪಡಿಸಲಾಗಿದ್ದು, 350/- ಗಳನ್ನು ಪಡಿತರ ಅಕ್ಕಿ- ಗೋಧಿ ಎತ್ತುವಳಿ, ಶುದ್ದೀಕರಣ, ಮಿಲ್ಲಿಂಗ್, ಸಾಗಾಣಿಕಾ ವೆಚ್ಚ ಮತ್ತು ಗ್ಯಾಸ್ ಸಿಲಿಂಡರ್, ಹಾಲು ಖರೀದಿಗಾಗಿ ನಿಗದಿಪಡಿಸಿ ವಸತಿ ಶಾಲೆಯ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗುತ್ತಿದೆ. ಪ್ರತಿ ಮಾಹೆಗೆ ಪ್ರತಿ ವಿದ್ಯಾರ್ಥಿಗೆ ತಲಾ ರೂ.100/- ಗಳ ವೆಚ್ಚದಲ್ಲಿ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಮೈಸೂರು (CFTRI) ರವರು ಶಿಫಾರಸ್ಸು ಮಾಡಿರುವ ಪೌಷ್ಠಿಕಾಂಶದ ಪುಡಿ (Nutrition Powder) ಯನ್ನು ಹಾಗೂ ಉಳಿಕೆ ರೂ. 1400/-ಗಳಲ್ಲಿ ಆಹಾರ ಪದಾರ್ಥಗಳ ಸರಬರಾಜಿಗೆ ನಿಗದಿಪಡಿಸಲಾಗಿರುತ್ತದೆ.<br><br>ಸಂಘದ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಮೆನು ಚಾರ್ಟ್ ಪ್ರಕಾರ ಗುಣಮಟ್ಟದ ಆಹಾರವನ್ನು ನೀಡುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಸೋಷಿಲ್ ಆಡಿಟ್ ಮಾಡುವ ಉದ್ದೇಶದಿಂದ ಆದೇಶ ಸಂಖ್ಯೆ:ಸಕಇ 260 ಎಂಡಿಎಸ್ 2024 ದಿನಾಂಕ:25.10.2024ರಲ್ಲಿ ಆಹಾರ ವ್ಯವಸ್ಥೆಯ ಬಗ್ಗೆ ಪಾರದರ್ಶಕತೆಯನ್ನು ತರಲು ಸಾಮಾಜಿಕ ಪರಿಶೋಧನೆ ವ್ಯವಸ್ಥೆಯನ್ನು ಜಾರಿಗೊಳಿಸಲು ಆದೇಶ ಹೊರಡಿಸಲಾಗಿದ್ದು, ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರು/ನಿಲಯಪಾಲಕರು ಪ್ರತಿದಿನ 3 ಬಾರಿ X (formarly Twitter) ನಲ್ಲಿ ಆಹಾರ ಪದಾರ್ಥಗಳ ಛಾಯಾಚಿತ್ರವನ್ನು ಪೋಸ್ಟ್ ಮಾಡುವಂತೆ ಸೂಚಿಸಲಾಗಿದ್ದು, ಅದರಂತೆ ಎಲ್ಲಾ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರು/ನಿಲಯಪಾಲಕರು X (formarly Twitter) ನಲ್ಲಿ ಆಹಾರ ಪದಾರ್ಥಗಳ ಛಾಯಾಚಿತ್ರವನ್ನು ಪೋಸ್ಟ್ ಮಾಡುತ್ತಿದ್ದಾರೆ.<br><br>ಮುಂದುವರೆದು, ಸುತ್ತೋಲೆ ಸಂಖ್ಯೆ: ಸಕಇ 272/ಪಕವಿ /2023 ದಿನಾಂಕ: 11.12.2023 ರಲ್ಲಿ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ಆಹಾರ ಪಾದಾರ್ಥಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸೂಚಿಸಲಾಗಿರುತ್ತದೆ.<br><br>ಸಂಘದ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರ ಮತ್ತು ತರಕಾರಿ ಪದಾರ್ಥಗಳ ಸರಬರಾಜಿಗೆ ಸಂಬಂಧಿಸಿದಂತೆ 06 ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳ ಕುರಿತು ಪರಿಶೀಲಿಸಿ, ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರು, ನಿಲಯಪಾಲಕರು ಹಾಗೂ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. |

**SWD/136/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

## ಶ್ರೀ ಛಲವಾದಿ ನಾರಾಯಣಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2070ಗೆ ಅನುಬಂಧ
## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಧೀನದ ವಸತಿ ಶಾಲೆ/ಕಾಲೇಜುಗಳಿಗೆ ಮೀಸಲಿಟ್ಟ ಅನುದಾನದ ವಿವರ

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವರ್ಗ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ಖಜಾನೆಯಿಂದ ಸೆಳೆದ ಮೊತ್ತ | ಖರ್ಚು ಮಾಡಲಾದ ಅನುದಾನ |
|---|---|---|---|---|---|
| | | | **ನಿರ್ವಹಣೆ** | | |
| 1 | ಪರಿಶಿಷ್ಟ ಜಾತಿ | 1127.65 | 1127.65 | 1127.65 | 1052.65 |
| 2 | ಪರಿಶಿಷ್ಟ ವರ್ಗ | 241.80 | 241.80 | 241.80 | 241.80 |
| 3 | ಹಿಂದುಳಿದ ವರ್ಗ | 325.20 | 325.20 | 325.20 | 325.20 |
| ಒಟ್ಟು (ಅ) | | **1694.65** | **1694.65** | **1694.65** | **1619.65** |
| | | | **ನಿರ್ಮಾಣ** | | |
| 1 | ಪರಿಶಿಷ್ಟ ಜಾತಿ | 650.00 | 325.00 | 325.00 | 246.47 |
| 2 | ಪರಿಶಿಷ್ಟ ವರ್ಗ | 220.00 | 110.00 | 110.00 | 94.22 |
| 3 | ಹಿಂದುಳಿದ ವರ್ಗ | 217.00 | 54.88 | 54.88 | 12.72 |
| ಒಟ್ಟು (ಆ) | | **1087.00** | **489.88** | **489.88** | **353.41** |
| ಒಟ್ಟು (ಅ+ಆ) | | **2781.65** | **2184.53** | **2184.53** | **1973.06** |

## ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಮೀಸಲಿಟ್ಟ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಲೆಕ್ಕಶೀರ್ಷಿಕೆವಾರು ವಿವರ | ನಿಗಧಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| 1 | 2225-00-101-0-32 ವಸತಿ ಶಾಲೆಗಳ ನಿರ್ವಹಣೆ | 4172.18 | 4172.18 |
| 2 | 2225-00-101-0-61 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ | 54,721.79 | 54,721.79 |
| 3 | 2225-00-101-0-29 ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ | 42,815.10 | 42,815.10 |